ಜನವರಿ - 1

ಜನಾಂಗಗಳೇ ನಮ್ಮ ದೇವರನ್ನು ವಂದಿಸಿರಿ; ಆತನನ್ನು ಸ್ತುತಿಸುವ ಧ್ವನಿ ಕೇಳಿಸಲಿ. ಆತನು ನಮ್ಮನ್ನು ಜೀವದಿಂದುಳಿಸಿ ನಮ್ಮ ಕಾಲುಗಳನ್ನು ಜಾರದಂತೆ ಕಾಪಾಡಿದನು.

-ಕೀರ್ತನೆಗಳು 66:8,9

ದೇವರು ಕೃಪಾ ಪೂರ್ಣನಾಗಿ ಈ ಹಿಂದಿನ ವರ್ಷದಲ್ಲೆಲ್ಲಾ ನಮ್ಮನ್ನು ಬೀಳದಂತೆ ಕಾಪಾಡಿಕೊಂಡು ಬಂದಿರುವುದಕ್ಕಾಗಿ ಆತನಿಗೆ ಸ್ತೋತ್ರವಾಗಲಿ. ನಾವು ದೇವರ ವಾಕ್ಯ ಹಾಗೂ ಅದರ ಸೇವೆಯಲ್ಲಿ ಈಗಲೂ ಒಂದೇ ಮನಸ್ಸಿನಿಂದ ಹೃದಯಪೂರ್ವಕವಾಗಿ ಕಾರ್ಯ ನಿರ್ವಹಿಸುತ್ತಿರುವದು ನಿಜವಾಗಿಯೂ ಪ್ರೋತ್ಸಾಹದಾಯಕವಾಗಿದೆ. ಇದಲ್ಲದೆ, ನಮ್ಮ ವಿರೋಧಿಯಾಗಿರುವ ಸೈತಾನನು ಕರ್ತನ ಜನರಲ್ಲಿ ತಪ್ಪು ತಿಳುವಳಿಕೆಯ ಭ್ರಮೆಯನ್ನು ಮೂಡಿಸಿ ಅವರಲ್ಲಿರುವ ನಿಜ ಸಹೋದರರೊಳಗೆ ಬೇಧ ಹುಟ್ಟಿಸಿ, ಸಹೋದರರನ್ನು ಪ್ರತ್ಯೇಕಪಡಿಸುವ ಕಾರ್ಯವನ್ನು ಮಾಡುತ್ತಾನೆ ಎಂಬುದನ್ನು ನೆನಪಿನಲ್ಲಿಡಬೇಕು. (2ಥೆಸ 2:10-12) ಪರಿಸ್ಥಿತಿ ಹೀಗಿದ್ದರೂ ಇನ್ನೊಂದು ವರ್ಷದ ಆರಂಭವಾಗಿರಲಾಗಿ ಈ ವರ್ಷವೂ ಸಹ ನಾವು ಬೀಳದಂತೆ ಸತ್ಯದಲ್ಲಿ ಸ್ಥಿರವಾಗಿರುವದರಿಂದ ದೇವರ ಮುಂದೆ ಕೃತಜ್ಞತೆ ವ್ಯಕ್ತಪಡಿಸೋಣ. ಹಾಗೂ ದೇವರು ನಮಗಾಗಿ ಏರ್ಪಡಿಸಿರುವ ಸತ್ಯ ಮತ್ತು ದೈವೀಕ ನೇಮಕಗಳಿಗೆ ಒಡಂಬಟ್ಟು ಬೀಳದಂತೆ ಕಾಪಾಡಿರುವುದು ಶ್ಲಾಘವಾಗಿದೆ-Z '99, 72 (ಖ 2442).

***　***　***

ಜನವರಿ - 2

ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರೂ ಆದ ಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ. -1ಕೊರಿಂಥ 6:20

ವರ್ಷದ ಪ್ರಾರಂಭದಲ್ಲಿ ಇದಕ್ಕಿಂತ ಮುಖ್ಯವಾದ ಉಪದೇಶ ನಮಗೆ ಬೇರೆ ಯಾವ ಪ್ರಸಂಗದಲ್ಲಿಯೂ ಸಿಗುವಂತಿಲ್ಲ. ಇದರ ತಾತ್ಪರ್ಯವೇನಂದರೆ, ನಾವು ನಮ್ಮವರಲ್ಲ, ಇನ್ನೊಬ್ಬಾತನಿಗೆ ಸೇರಿದ್ದೇವೆ. ಈ ಕಾರಣದಿಂದ ನಮ್ಮನ್ನು ನಾವೇ ಮೆಚ್ಚಿಸಬೇಕಿಲ್ಲ. ಆದರೆ, ಆತನಿಗೆ ನಾವು ಮೆಚ್ಚಿಗೆಯಾಗಬೇಕು. ಹಾಗೆಯೇ ನಮಗೆ ನಾವೇ ಸೇವೆ ಮಾಡುವಂತಿಲ್ಲ. ಆತನೊಬ್ಬನನ್ನೇ ಸೇವಿಸಬೇಕು. ನಮ್ಮ ಮನದಿಚ್ಛೆಯಂತೆ ನಾವು ನಡೆಯುವಂತಿಲ್ಲ. ಆದರೆ, ದೇವರ ಚಿತ್ತವನ್ನು ಅರಿತು ಅದರಂತೆ ನಡೆಯಬೇಕು. ಹಾಗಾದರೆ, ಇವುಗಳಿಂದ ನಮಗೆ ಆಗುವ ಪ್ರಯೋಜನವೇನು? ಮೊದಲನೆಯದಾಗಿ ಪರಿಪೂರ್ಣವಾದ, ಮಿಗಿಲಾದ ಪವಿತ್ರತೆಯ ಲಾಭ ಉಂಟು. ಎರಡನೆಯದಾಗಿ ಪಾಪದಿಂದ ಬಿಡುಗಡೆ ಸಿಕ್ಕಿ ನೀತಿಗೆ ಬಾಧ್ಯರಾಗುವದು. ಮೂರನೆಯದಾಗಿ ಅಹಂ ಮತ್ತು ಲೌಕಿಕತೆಯಿಂದ ಪ್ರತ್ಯೇಕಿಸಲ್ಪಟ್ಟು ಕ್ರಿಸ್ತಯೇಸುವಿನಲ್ಲಿ ದೈವಚಿತ್ತಕ್ಕೆ ನಮ್ಮನ್ನೇ ಒಳಪಡಿಸಿಕೊಳ್ಳುವದು-Z '97, 35 (ಖ 2097).

***　***　***

ಜನವರಿ - 3

ಎಡೆಬಿಡದೆ ಪ್ರಾರ್ಥನೆ ಮಾಡಿರಿ. -1ಥೆಸಲೋನಿಕ 5:17

ನಾವು ದೇವರಿಗೆ ಸಲ್ಲಿಸುವಂಥ ಪ್ರಾರ್ಥನೆಗಳಲ್ಲಿ ಸಹಜವಾದ ಖಚಿತ ನಿರ್ಧಾರಗಳು, ಒತ್ತಾಯಿಸುವಿಕೆ ಹೇಗಾದರೂ ಇರಬಹುದು. ಆದರೆ, ಇದರಲ್ಲಿ ವೇದೋಕ್ತಿಗಳ ಸೂಚನೆಗಳನ್ನು ಇವುಗಳಲ್ಲಿ ಅಳವಡಿಸುವದು ಬಹಳ ಮುಖ್ಯವಾದದ್ದು ಆಗಿದೆ. ನಮ್ಮಲ್ಲಿ ನಾನಾ ತೆರನಾದ ಸ್ವಭಾವಸಿದ್ಧ ಮನದಾಳಗಳು ಇದ್ದರು ಅವುಗಳನ್ನು ಮನಸ್ಸಿಗೆ ತಾರದೆ, ನಾನು ಚಿಕ್ಕ ಮಕ್ಕಳ ಹಾಗೆ, ಮೇಲಿನಿಂದ ಬರುವಂಥ ದೈವ ನಿರ್ದೇಶನಗಳನ್ನು ನಮ್ಮ ಅಭಿಪ್ರಾಯಗಳು ಹಾಗೂ ನಡತೆಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವದು ಅವಶ್ಯ. ಇದಲ್ಲದೆ, ನಮ್ಮ ಕರ್ತನು ನುಡಿದಂತೆ “ಬೇಡಿಕೊಳ್ಳಿರಿ [ಇದನ್ನು ಕರ್ತನ ಹೆಸರಿನಲ್ಲಿ] ನಿಮಗೆ ಸಿಕ್ಕುವದು. ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು. ಯೋಹಾನ 16:24 ವಿಧೇಯರಾಗಿ, ನಂಬಿಗಸ್ತರಾಗಿ ಯಾರಾರು ಇರುವರೋ ಅವರು ಆತನನ್ನು ಏನೇನು ಬೇಡಿಕೊಳ್ಳುತ್ತಾರೋ. ಅವರಿಗಾಗಿ ಪರಲೋಕದ ತಂದೆಯ ಭಂಡಾರದಲ್ಲಿ ಅಗಣಿತ ಕೃಪಾವರಗಳ ಆಶೀರ್ವಾದ ನಿಧಿಗಳು ತುಂಬಿರುತ್ತವೆ-Z ’96, 162 (ಖ 2004).

*** *** ***

ಜನವರಿ - 4

ಯೆಹೋವನನ್ನು ನಿರೀಕ್ಷಿಸಿಕೊಂಡಿರು, ಧೃಡವಾಗಿರು, ನಿನ್ನ ಹೃದಯವು ಧೈರ್ಯದಿಂದಿರಲಿ, ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು. -ಕೀರ್ತನೆಗಳು 27:14

ದೇವರ ಯೋಜನೆಗಳ ಕಾರ್ಯನಿರ್ವಹಣೆಗಳಲ್ಲಿ ಕಾಲ ಅಥವಾ ಸಮಯ ಎಂಬುದು ಬಹಳ ಮುಖ್ಯವಾದದ್ದು, ನಾವು ದೇವರಿಂದ ನಿರೀಕ್ಷಿಸಿಕೊಂಡ ಆಶೀರ್ವಾದಗಳ ಅನುಭವ ತಡವಾಗಿ ಬರುವಾಗ ನಮ್ಮ ಸಹನೆಯ ಪರೀಕ್ಷೆ ಆಗುವಲ್ಲಿ ಇದರಿಂದ ನಾವು ನಿರಾಶೆಗೊಳ್ಳಬಾರದು. ದೇವರು ಈ ಭೂಮಿಯನ್ನು ಕ್ರಮಪಡಿಸಿ ಮನುಷ್ಯರ ನಿವಾಸ ಯೋಗ್ಯ ಮಾಡುವದಕ್ಕಾಗಿ ಸಮಯ ತೆಗೆದುಕೊಳ್ಳಬೇಕಾಯಿತು. ಲೋಕದ ಜನರಿಗೆ ಕೆಟ್ಟತನದಿಂದ ಅನುಭವದ ನೀತಿಪಾಠ ಕಲಿಯಲಿಕ್ಕೆ ಸಮಯ ಬೇಕಾಗಿತ್ತು. ಯೇಸುಕ್ರಿಸ್ತನು ಲೋಕರಕ್ಷಕನಾಗಿ ಬರುವದಕ್ಕೆ ತಯಾರಿಕೆ ನಡೆಸುವದಕ್ಕೆ ಸಮಯ ಸರಿಯಬೇಕಾಗಿತ್ತು. ಕ್ರಿಸ್ತನ ಸಭೆಯವರು ತಮ್ಮನ್ನು ಸಿದ್ಧಪಡಿಸಿಕೊಂಡು ದೇವರ ರಾಜ್ಯದಲ್ಲಿ ಮಹಿಮೆಗೊಂಡ ಆಳ್ವಿಕೆ ನಡಿಸುವದಕ್ಕೆ ಸಹ ಸಮಯದ ಅವಶ್ಯಕತೆ ಇತ್ತು. ಕಡೇದಾಗಿ, ದೇವ ಜನರು ವೈಯಕ್ತಿಕವಾಗಿ ತಮ್ಮ ತಮ್ಮ ಜೀವನ ಕ್ರಮಗಳನ್ನು ಸರಿಪಡಿಸಿಕೊಳ್ಳುವದಕ್ಕೂ ಕಾಲದ ಅವಶ್ಯಕತೆ ಇರುವದು. ನಮ್ಮ ಪ್ರಾರ್ಥನೆಗಳಿಗೆ ದೇವರು ಸೂಕ್ತ ಉತ್ತರ ಕೊಡುವದು ವಿಳಂಬಗೊಂಡರೂ, ಇದನ್ನು ಆತನು ಮರೆಯುವ ಹಾಗಿಲ್ಲ. ಯಾವಾತನು ಗುಬ್ಬಿಗಳು ನೆಲಕ್ಕೆ ಬೀಳದಂತೆ ನೋಡಿಕೊಂಡು ಮತ್ತು ನಮ್ಮ ತಲೆಕೂದಲುಗಳ ಕ್ಷೇಮ ಕಾಪಾಡಿಕೊಂಡು ಎಚ್ಚರವಹಿಸುವಲ್ಲಿ, ನಮ್ಮ ಅವಶ್ಯಕತೆಗಳಿಗಾಗಿ ಕ್ಷೀಣ ಧ್ವನಿಯಿಂದ ಕೂಗಿಕೊಳ್ಳುವದನ್ನೂ ಸಹ ಆತನು ಅಲಕ್ಷ್ಯ ಮಾಡುವದಿಲ್ಲ-Z ’95, 20 (ಖ 1759).

*** *** ***

ಜನವರಿ - 5

ದೇವರೇ ನಿನ್ನನ್ನು ದೂಷಿಸಿದವರ ದೂಷಣೆಗಳು ನನ್ನ ಮೇಲೆ ಬಂದವು.

-ರೋಮಾಪುರದವರಿಗೆ 15:3

ಯಾವ ರೀತಿಯಿಂದ ಕ್ರಿಸ್ತನು ತನ್ನ ಮೇಲೆ ಬಂದ ದೂಷಣೆಗಳ ಬಾರ ಹೊತ್ತು ಸಹಿಸಿದನೋ ನಾವೂ ಸಹ ಅಂಥಹ ದುರವಸ್ಥೆ ಅನುಭವಿಸುವದನ್ನು ಅನುಸರಿಸಬೇಕು. ನಮ್ಮನ್ನು ಹೀಗೆ ನಡಿಸಿಕೊಂಡವರಿಗಾಗಿ, ದೇವರಲ್ಲಿ ಪ್ರಾರ್ಥಿಸುವದಲ್ಲದೆ, ಅವರ ತಪ್ಪಿನ ಅರಿವಾಗಿ ಪಶ್ಚಾತ್ತಾಪಪಟ್ಟಲ್ಲಿ ದೇವರು ಒಂದು ವೇಳೆ ಅವರಿಗೆ ಕರುಣೆ ತೋರಿಸಬಹುದು. ಇದರಲ್ಲಿ ನಮ್ಮ ತಾಳ್ಮೆ, ಭಕ್ತಿಭಾವಗಳು ಆವರಿಸಿ ಆತನ ಸೇವೆಯಲ್ಲಿ ನಿಷ್ಠಾವಂತ ಸೈನಿಕರಂತೆ ನಾವು ಕಾಣಿಸಿಕೊಳ್ಳಬೇಕು. ಕ್ರಿಸ್ತನು ಈ ಲೋಕದಲ್ಲಿದ್ದಾಗ, ಮಾನವ ಭ್ರಷ್ಟತೆ ಹೆಚ್ಚಿರುವದನ್ನು ನೋಡಿ ಆಶ್ಚರ್ಯಪಡಲಿಲ್ಲ. ತಾನಿದ್ದ ಲೋಕವು ಪಾಪದ ದೆಸೆಯಿಂದ ದ್ವೇಷ ಪೂರಿತವಾಗಿದ್ದು, ಕತ್ತಲೆಯ ಅಧಿಪತಿ ಸೈತಾನನ ವಶಕ್ಕೆ ಒಳಪಟ್ಟಿದ್ದು ಎಂದು ಆತನಿಗೆ ತಿಳಿದಿತ್ತು. ಆದ್ದರಿಂದ, ಇದರ ಪರಿಣಾಮವಾಗಿ ತನ್ನ ಮೇಲೆ ದೂಷಣೆಗಳು, ಪರಿಹಾಸ್ಯ, ಹಿಂಸೆ ಇವುಗಳು ಬಂದಿವೆ ಎಂಬದು ಆತನಿಗೆ ಮೊದಲೇ ತಿಳಿದಿತ್ತು. ಇವೆಲ್ಲವನ್ನು ಆತನು ಮಹಾಪ್ರೀತಿಯಿಂದ ತನಗೆ ಬಾಧೆಗಳಾದರೂ ಸಹಿಸಿಕೊಂಡು ತನ್ನ ಕರುಣೆ ಮಾನವೀಯತೆಯನ್ನು ಪ್ರದರ್ಶಿಸುವಲ್ಲಿ ಯಶಸ್ವಿಯಾದನು-Z ’96, 83 (ಖ 1963).

*** *** ***

ಜನವರಿ - 6

ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು, ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು. -ಕೀರ್ತನೆಗಳು 90:12

ತಮ್ಮ ಜೀವಿತದ ದಿವಸಗಳನ್ನು ಎಣಿಸಿಕೊಳ್ಳುವ ಕ್ರೈಸ್ತನು ಅದನ್ನು ಉದಾಸೀನದಿಂದಾಗಲಿ ಅಸಮಾಧಾನದಿಂದಾಗಲಿ ಮಾಡದೆ ಜಾಗರೂಕನಾಗಿ ಪ್ರತಿದಿನವನ್ನೂ ತನ್ನ ಗಣನೆಗೆ ತೆಗೆದುಕೊಳ್ಳುತ್ತಾನೆ. ಹಾಗೆಯೇ ಆ ದಿವಸಗಳ ಪ್ರತಿಕ್ಷಣವೂ ಆಶೀರ್ವಾದಗಳಿಂದ ಕೂಡಿದ್ದು, ತಮ್ಮನ್ನು “ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು” ಪ್ರಸಿದ್ಧಿ ಮಾಡಲಿಕ್ಕೆ ದೊರೆತ ಸಂದರ್ಭಗಳು, ಅವಕಾಶಗಳು ಅನೇಕವೆಂದು ಪರಿಗಣಿಸುತ್ತಾನೆ. ತನ್ನೊಂದಿಗೆ ಯಾತ್ರಿಗಳು ಪಯಣಿಸುವಲ್ಲಿ ಅವರಿಗೆ ತನ್ನಿಂದಾಗುವ ಸಹಾಯ ಮಾಡುತ್ತಾ, ಈ ಅವಕಾಶಗಳಿಂದ ತನ್ನ ಗುಣಲಕ್ಷಣಗಳ

ಉನ್ನತಿಗೆ ಹೆಚ್ಚು ಗಮನ ನೀಡಿ ದೇವರಿಗೆ ಸಮರ್ಪಕವಾದ ಪರಿಪಕ್ವತೆಯನ್ನು ಪಡೆದು ಹೀಗೆ ದೇವರ ಮಗನಾದ ಯೇಸು ಕ್ರಿಸ್ತನ ಸಾರೂಪ್ಯ ಹೊಂದುವಲ್ಲಿ ಯಶಸ್ವಿಯಾಗುತ್ತಾನೆ-Z '01, 333 (ಖ 2895).

*** *** ***

ಜನವರಿ - 7

ಯಾರನ್ನೂ ದೂಷಿಸದೆ, .......... ಸಾತ್ವಿಕರಾಗಿರಬೇಕೆಂತಲು ಅವರಿಗೆ ಜ್ಞಾಪಕಕೊಡು.

-ತೀತನಿಗೆ 3:2

ಕ್ರಿಸ್ತ ಯೇಸುವಿನ ಒಳ್ಳೆ ಸೈನಿಕರೆನಿಸಿಕೊಳ್ಳಬೇಕಾದರೆ, ಹುಚ್ಚು ಮಾತು, ಇತರರನ್ನು ದೂಷಿಸುವದು, ಮತ್ತೊಬ್ಬರ ನಡತೆಯನ್ನು ಹಾಳುಮಾಡುವ ಮತ್ತು ಇನ್ನೊಬ್ಬರ ಸನ್ನಡತೆ ದೋಚಿಕೊಳ್ಳುವದಕ್ಕೆ ಸಮಾನ ಎಂಬ ನಿಜವಾದ ಅರಿವು ಪಡೆದುಕೊಂಡಲ್ಲಿ ದೇವರ ದೃಷ್ಟಿಯಲ್ಲಿ ಇವುಗಳಿಗೆ ಎಂಥ ಕೀಳು ಸ್ಥಾನ ಸಿಕ್ಕಿದೆ ಎಂಬದನ್ನು ಪರಿಗಣಿಸಿದರೆ ನಮ್ಮಲ್ಲಿರುವ ನೂತನ ಹೃದಯ, ಮನಸ್ಸು, ಇಚ್ಛೆಗಳು ಜಾಗೃತಗೊಂಡು ಸೈತಾನನ ಮತ್ತು ಶರೀರ ಭಾವದ ಕರ್ಮಗಳ ಮೇಲೆ ವಿಜಯಸಾಧಿಸಲಿಕ್ಕೆ ಹೆಚ್ಚು ಶಕ್ತಿ ಚಟುವಟಿಕೆಗಳ ವಿನಿಯೋಗ ಆಗಬೇಕು. ನಮ್ಮಲ್ಲಿ ಪ್ರತಿಯೊಬ್ಬನು ಹುಳಿಹಿಟ್ಟಿನಂತಿರುವ ಕೆಟ್ಟತನ ಹೊಟ್ಟೆಕಿಚ್ಚು ಜಗಳ, ಸೊಟ್ಟಭಾವನೆ, ದೂಷಣೆ ಮಾತುಗಳು ಇವುಗಳನ್ನೆಲ್ಲಾ ವರ್ಜಿಸಿ ತನ್ನಲ್ಲಿ ಶುದ್ಧ ಹೃದಯದ ನಿರ್ಮಾಣ ಮಾಡಿ ದೈವ ಸ್ವರೂಪದಲ್ಲಿ ಮುಂದುವರಿಯುವಂಥ ಪ್ರಗತಿ ಸಾಧಿಸಬೇಕು-Z '03, 425 (ಖ 3272).

*** *** ***

ಜನವರಿ - 8

ಯಾರೂ ಅಪಕಾರಕ್ಕೆ ಅಪಕಾರ ಮಾಡದಂತೆ ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡಿಕೊಂಡಿರುವದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ.

-1ಥೆಸಲೋನಿಕ 5:15

ಪವಿತ್ರ ಬರಹಗಳ ಮಾದರಿ ಪ್ರಕಾರ ದೇವಜನರು ತುಂಬಾ ನಾಜೂಕಾದ, ತುಂಬಾ ಪರಿವರ್ತನೆಗೊಂಡ ಕಾರುಣ್ಯ ದಯಾರಸಗಳಿಂದ ಉದಾರತೆಯಿಂದ ಕೂಡಿ, ಇಡೀ ಲೋಕದಲ್ಲಿನ ಜನರಿಗಿಂತ ಹೆಚ್ಚಿನ ಗುಣಮಟ್ಟದಲ್ಲಿ ನಿಂತಿರುವವರಾಗಿ ಕಾಣಿಸಿಕೊಳ್ಳಬೇಕು. ಇಷ್ಟೂ ಅಲ್ಲದೆ, ಇಲ್ಲಿ

ಹೇಳಿರುವಂಥ ಗುಣಲಕ್ಷಣಗಳು ಕೇವಲ ಹೊರಗಿನ ತೋರಿಕೆಯಂತೆ ಲೋಕವು ವ್ಯಕ್ತಗೊಳಿಸುವ ರೀತಿಯನ್ನನುಸರಿಸದೆ, ದಯಾಪರತೆ, ಸುಶೀಲತೆ ಇಂಥ ಸಕಲ ಗುಣಗಳೂ ಹೃದಯಪೂರ್ವಕವಾಗಿ ಹೊರಹೊಮ್ಮಿ ಪರಿಪಕ್ವತೆಯಿಂದ ಕೂಡಿರಬೇಕು. ಇದರ ಮೂಲಕ ದೇವರಾತ್ಮನ ಫಲಗಳ, ಸತ್ಯಾತ್ಮ, ಪ್ರೀತಿಯ ಭಾವನೆ, ನ್ಯಾಯಾನುಕ್ರಮ ಇವೆಲ್ಲವುಗಳ ಅಮೂಲ್ಯ ಪರಿಣಾಮಗಳಲ್ಲಿ ಪ್ರಭಾವಿತಗೊಳ್ಳಬೇಕು-Z '01, 297 (ಖ 2877).

***        ***        ***

ಜನವರಿ - 9

ನಿನಗೂ ಇತರರಿಗೂ ತಾರತಮ್ಯ ಮಾಡಿದವರು ಯಾರು? ದೇವರಿಂದ ಹೊಂದದೆ ಇರುವಂಥದು ನಿನ್ನಲ್ಲಿ ಒಂದಾದರೂ ಉಂಟೋ? -1ಕೊರಿಂಥದವರಿಗೆ 4:7

ದೇವರಲ್ಲಿ ತಮ್ಮನ್ನೆ ಪ್ರತಿಷ್ಠೆಮಾಡಿಕೊಂಡಿರುವವರು ತಾವು ಪ್ರಸ್ತುತ ಕೃಪೆ ಮತ್ತು ಸತ್ಯ ತಮ್ಮ ಸ್ವಂತ ತಿಳುವಳಿಕೆಯಿಂದಾಗಲಿ ಅಥವಾ ಇತರರ ಜ್ಞಾನ ವಿವೇಕಗಳಿಂದಾಗಲಿ ಉಂಟಾಗಿರುವದಿಲ್ಲ, ಆದರೆ, ಇದಕ್ಕೆಲ್ಲಾ ಮೂಲ ಕಾರಣ ದೈವಜ್ಞಾನ ಕೃಪೆಗಳ ಆಧಾರವೇ ಎಂಬದನ್ನು ಮನದಟ್ಟು ಮಾಡಿಕೊಳ್ಳಬೇಕಾದುದು ಅಗತ್ಯ. ದೇವಜನರಿಗೆ ಸೇವೆ ಸಲ್ಲಿಸುವ ಸೇವಕರು, ಹಾಗೆ ಸಭೆಯ ವಿವಿಧ ಭಾಗಗಳಲ್ಲಿ ಸೇವೆ ಮಾಡುವ ದಾಸರು ಸಹ ಇಂಥ ವಿಶ್ವಾಸಗಳ ಅಡಿಯಾಳಾಗಿರಬೇಕು. ಯಾಕಂದರೆ, ಕ್ರಿಸ್ತನಂಬಿಕೆಯಲ್ಲಿ ಒಂದೇ ಮನೆಯಂತಿರುವವರಿಗೆ ಸೇವೆ ಮಾಡುವಲ್ಲಿ ಅವರ ಜವಾಬ್ದಾರಿ ಗುರುತರವಾಗಿದ್ದು, ದೇವರ ಆಳ್ವಿಕೆಯಲ್ಲಿ ಅವರ ಸ್ಥಾನಮಾನಗಳು ಹೆಚ್ಚಿನ ಕಾರ್ಯವೈಖರಿಯಿಂದ ಕೂಡಿದ್ದು ಅವುಗಳನ್ನು ಕಡೇತನಕ ಉಳಿಸಿಕೊಳ್ಳುವುದು ಅವರ ಹೊಣೆಗಾರಿಕೆ ಆಗಿರುತ್ತದೆ. ಹಾಗೆಯೇ, ಯಾರು ಇಂಥ ಆದರ್ಶಗಳ ಪರಿಪಾಲನೆಯನ್ನು ತಾವು ಒಪ್ಪಿಕೊಂಡು ಅರಿಕೆ ಮಾಡುವದರಲ್ಲಿ ಹಿಂಜರಿಯುತ್ತಾರೋ, ಅಂಥವರಿಗೆ ಇದರ ಮಹತ್ವದ ಸಂಗತಿ ಮರೆಯಾಗಿರುತ್ತದೆ-Z '03, 430 (ಖ 3277).

***        ***        ***

ಜನವರಿ - 10

ಬಾಧೆಯನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ವಿಷಯದಲ್ಲಿ ಕರ್ತನ ಹೆಸರಿನಿಂದ ಮಾತಾಡಿದ ಪ್ರವಾದಿಗಳನ್ನೇ ಮಾದರಿ ಮಾಡಿಕೊಳ್ಳಿರಿ. -ಯಾಕೋಬ 5:10

ಸರಿಯಾದ ಸತ್ಯವಾದ ಮಾರ್ಗ ಈಗಲೂ ಇಕ್ಕಟ್ಟಾದ ಮಾರ್ಗವಾಗಿ ಪರಿಣಮಿಸಿ, ಒಬ್ಬನು ತನ್ನನ್ನು ತಗ್ಗಿಸಿಕೊಂಡು ಹಾಗೇ ನಿರಾಕರಿಸಿಕೊಂಡು, ಅದು ದೈನ್ಯತೆ ಸಾತ್ವಿಕತ್ವಗಳಿಂದ ಕೂಡಿದ್ದು, ಇದೇ ಮಾರ್ಗದಲ್ಲಿ ನಡೆಯುವಲ್ಲಿ ಹೆಚ್ಚಿನ ಬಲತ್ರಾಣಗಳನ್ನು ವ್ಯಯಿಸಿಬೇಕಾಗುತ್ತದೆ. ಅಂದರೆ, ವರ್ಷ ವರ್ಷಕ್ಕೆ ಈ ಮಾರ್ಗದಲ್ಲಿ ಕ್ರಮಿಸಲು ಹೆಚ್ಚು ಶ್ರಮ ವಹಿಸಬೇಕಾಗುತ್ತದೆ. ಹೀಗೆ ನಾವು ಈ ಮಾರ್ಗದಲ್ಲಿ

ನಡೆದುಹೋಗುವಲ್ಲಿ, ಹೆಚ್ಚಿನ ಕೃಪೆ, ಜ್ಞಾನ ತಿಳುವಳಿಕೆಯಲ್ಲಿ ಪ್ರಗತಿ ಹೊಂದುವಾಗ ನಮ್ಮಲ್ಲಿ ಸಹಜವಾಗಿ ಹೆಮ್ಮೆ, ಗರ್ವ ಉಬ್ಬಿಕೊಳ್ಳುವದು, ದುಡುಕಿ ನಡೆದುಕೊಳ್ಳುವದು ಇಂಥ ಅವಗುಣಗಳು ಉದ್ಭವಿಸುವದುಂಟು. ನಾವು ಎಷ್ಟರಮಟ್ಟಿಗೆ ದೇವರ ಸೇವಾಕಾರ್ಯಗಳು ನಂಬಿಕೆ, ನಿರೀಕ್ಷೆ, ಪ್ರೀತಿ ಇವುಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾ ಹೋಗುವೆವೋ ಅಷ್ಟೇ ವೇಗದಿಂದ ಸೈತಾನನು ವಿರೋಧ ಒಡ್ಡುತ್ತಾನೆ. ಅದೇ ರೀತಿಯಲ್ಲಿ ಅವನ ರಾಯಭಾರಿಗಳು ನಮ್ಮನ್ನು ಹಿಂದಿನಿಂದ ದೂಷಿಸುವದು, ಇಲ್ಲಸಲ್ಲದ ಆರೋಪ ಮಾಡುವದು, ಇವುಗಳ ಮೂಲಕ ನಮಗೆ ನೋವು ಉಂಟಾಗುವಂತೆ ಮಾಡುತ್ತಾರೆ. ಇವೆಲ್ಲವನ್ನು ಸಹಿಸಿಕೊಳ್ಳುವಾಗ ನಾವು ಹೆಚ್ಚಿನ ತಾಳ್ಮೆ ವಹಿಸಬೇಕಾಗುತ್ತದೆ-Z ’95, 3 (ಖ 1751).

***    ***    ***

ಜನವರಿ - 11

“ನಾನು ಯೆಹೋವನ ವಿಷಯವನ್ನು ಪ್ರಕಟಿಸೆನು, ಆತನ ಹೆಸರಿನಲ್ಲಿ ಇನ್ನು ಮಾತಾಡೆನು ಎಂದುಕೊಂಡರೆ, ಉರಿಯುವ ಬೆಂಕಿಯು ನನ್ನ ಎಲುಬುಗಳಲ್ಲಿ ಅಡಕವಾಗಿದೆಯೋ ಎಂಬಂತೆ ನನ್ನ ಹೃದಯದಲ್ಲಿ ಸಂಕಟವಾಗುತ್ತದೆ; ತಡೆದು ತಡೆದು ಆಯಾಸಗೊಂಡಿದ್ದೇನೆ; ಸಹಿಸಲಾರೆ.”
-ಯೆರೆಮಿಯ 20:9

ನಾವು ಈಗ ದೇವರ ಅನುಗ್ರಹ, ಆಶೀರ್ವಾದಗಳ, ಜ್ಞಾನೋದಯಗಳ ಸೌಕರ್ಯಗಳನ್ನು ಪಡೆದು ಅದರಲ್ಲಿ ಮುಂದುವರಿಯುವಂಥ ಸೌಭಾಗ್ಯ ಲಭಿಸಿರುವದರಿಂದ ದೇವರಿಗೆ ಕೃತಜ್ಞತಾ ಸ್ತುತಿ ಅರ್ಪಿಸುವದನ್ನು ಮರೆಯಬಾರದು. ಇದರಲ್ಲಿ ಯೋಹಾನನಿಗೆ ಇದ್ದ ಸ್ವಾಮಿನಿಷ್ಠೆ, ಪ್ರೀತಿಭಾವನೆ, ಆಗ್ರಹ, ಅದ್ಭುತ ಶಕ್ತಿ ಇವುಗಳ ಮಾದರಿ ಮಾಡಿಕೊಳ್ಳುವಂತೆ ನಮ್ಮನ್ನು ಕಾದುಕೊಳ್ಳುವದನ್ನು ಮರೆಯಬಾರದು. ಯಾಕಂದರೆ, ಆತನಿಗೆ ಇದ್ದ ಈ ಎಲ್ಲಾ ಸದ್ಗುಣಗಳ ಅನುಕರಣೆ ನಮ್ಮಲ್ಲಿ ದೇವರಿಗೆ ಹೆಚ್ಚಿನ ಭಕ್ತಿ, ಭಾವ ವ್ಯಕ್ತಪಡಿಸಲಿಕ್ಕೆ ಸಹಾಯವಾಗುತ್ತದೆ. ಇದಲ್ಲದೆ, ಯೋಹಾನನಿಗೆ ಮತ್ತು ಅವನ ತಮ್ಮನಿಗೆ ಇದ್ದ ನಿರಂತರ ಆಗ್ರಹದ ಶಕ್ತಿಯಿಂದಾಗಿ ಅವರಿಗೆ ಗುಡುಗಿನ ಮರಿಗಳು ಎಂಬ ನಾಮಾಂಕಿತವಾಗುತ್ತದೆ. ನಮ್ಮಲ್ಲಿ ಒಂದು ಅದ್ಭುತ ಶಕ್ತಿ ಉಂಟಾಗಬೇಕು. ಇದು ಬಲಿದಾನಗಳ ಪೂರಕವಾಗಿದ್ದುಕೊಂಡು ದೇವರ ಸ್ವತ್ತುಗಳೆಂದು ಎಣಿಸಿಕೊಂಡಿರುವ ನಮ್ಮ ದೇಹಾತ್ಮಗಳಿಂದ ಆತನಿಗೆ ಮಹಿಮೆ ಸಲ್ಲುವಂತೆ ಪ್ರಯತ್ನಿಸೋಣ- Z-01 151 (ಖ-2806)

***    ***    ***

ಜನವರಿ - 12

ಸಹೋದರರೆ, ನಿಮ್ಮಲ್ಲಿ ಯಾರಾದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ, ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು. -ಗಲಾತ್ಯದವರಿಗೆ 6:1

ನಮ್ಮಲ್ಲಿ ಯಾರಾದರೂ ತಪ್ಪಾಗಿ ನಡೆದುಕೊಂಡರೆ, ಅಂಥವನನ್ನು ತಿದ್ದಿ, ಸರಿಪಡಿಸುವಾಗ ನಾವು ಯಾವ ರೀತಿ ನಡಕೊಳ್ಳಬೇಕು? ಈ ವಿಷಯ ತುಂಬ ಸೂಕ್ಷವಾಗಿರುವದರಿಂದ ದೋಷಕ್ಕೆ ಒಳಗಾದವನನ್ನು, ವಿನಯದಿಂದ ಶಾಂತಭಾವದಿಂದ ನಮ್ರತೆಯಿಂದ ಅವನೊಂದಿಗೆ ಮಾತನಾಡಿ ಸರಿಪಡಿಸುವ ಯತ್ನ ಮಾಡಬೇಕು. ಅವನ ಮೇಲೆ ನೇರವಾಗಿ ಆರೋಪ ಹೊರಿಸುವದಾಗಲಿ, ಆ ದೋಷದ ಬಗ್ಗೆ ವಿವರಗಳನ್ನು ಬಯಸುವದಾಗಲಿ ಮಾಡಬಾರದು. ಹೇಗಂದರೆ, ತಪ್ಪಿತಸ್ಥನ ಈಗಿನ ಸ್ಥಿತಿಗತಿಗಳನ್ನು ಮಾತ್ರ ವಿಚಾರಣೆಯಿಂದ ತಿಳುಕೊಳ್ಳಬೇಕೆ ಹೊರತು, ಅವನಿಂದ ತಪ್ಪಾದ ಹಿಂದಿನ ಸ್ಥಿತಿಯ ಬಗ್ಗೆ ವಿಚಾರಿಸುವದು ಸೂಕ್ತವಲ್ಲ. ಅವನು ತಪ್ಪಾದ ಕಾರ್ಯವೆಸಗಿದ್ದಕ್ಕೆ ಅವನಿಗೆ ಅದಕ್ಕಾಗಿ ಶಿಕ್ಷೆಯಾಗಲೇಬೇಕು ಎಂಬ ಹಠಸಾಧನೆ ಮಾಡದೆ, ಆ ದೋಷದಿಂದ ವಿಮುಕ್ತನಾಗುವದಕ್ಕೆ ಏನು ಮಾಡಬೇಕೋ ಅದನ್ನು ಮಾತ್ರ ನಿರ್ವಹಿಸಬೇಕು. ಮುಖ್ಯವಾಗಿ ಯಾರಾದರು ತಪ್ಪುಗಳನ್ನು ನಡಿಸಿ ದೋಷಗಳಾಗಿರುವದನ್ನು ಕಂಡು ಅದರ ಬಗ್ಗೆ ವಿಚಾರಣೆ ಮಾಡಿ ಅದಕ್ಕೆ ಶಿಕ್ಷೆ ವಿಧಿಸುವ ಪ್ರಯತ್ನ ಮಾಡಲೇಬಾರದು. ಯಾಕಂದರೆ, ನ್ಯಾಯ ವಿಚಾರಣೆ ಮಾಡಿ ಅದಕ್ಕೆ ತಕ್ಕ ಶಿಕ್ಷೆ ವಿಧಿಸುವ ಹೊಣೆಗಾರಿಕೆ ಕರ್ತನಲ್ಲಿರುವದು. ಇದಲ್ಲದೆ, ನಾವು ಯಾವದೇ ಸಂದರ್ಭದಲ್ಲಿ ಮುಯ್ಯಿಗೆ ಮುಯ್ಯಿ ತೀರಿಸುವ ಕಾರ್ಯಕ್ಕೆ ಕೈಹಾಕದೆ, ಕೆಟ್ಟದ್ದನ್ನು ನಡಿಸಿದ್ದಕ್ಕೆ ಪ್ರತಿಯಾಗಿ ಕೆಟ್ಟ ಪ್ರತಿಫಲವನ್ನೀಯುವದರ ಕೃತ್ಯವೆಸಗಬಾರದು-Z ’01, 150 (ಖ 2806)

*** *** ***

ಜನವರಿ - 13

ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪ ಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪ ಮಾಡಿದರೆ, ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸುಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. -1ಯೋಹಾನ 2:1

ಒಂದು ವೇಳೆ ನಮ್ಮಲ್ಲಿ ನಂಬಿಕೆ ರಹಿತವಾದ ಪರಿಸ್ಥಿತಿ ಅಥವಾ ಶಾರೀರಿಕ ಬಲಹೀನತೆ ಉಂಟಾಗಿ ಆಗ ಯಾವದಾದರೂ ಒಂದು ತಪ್ಪು ಮಾಡಿ ದೋಷಿಗಳಾಗಿ ದೇವರ ಚಿತ್ತ ಹಾಗೂ ನಮ್ಮ ವೈಯಕ್ತಿಕ, ಆಧ್ಯಾತ್ಮಿಕ ಭಾವನೆಗಳಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅದರ ಅರಿವು ನಮ್ಮಲ್ಲಿ ಉಂಟಾಗಿ ದೋಷ ವಿಮುಕ್ತರಾಗುವಂತೆ ನಾವು ಕೂಡಲೆ ಕ್ರಮತೆಗೆದುಕೊಂಡು ಕರ್ತನಲ್ಲಿ ಪ್ರಾರ್ಥನಾಪೂರಕವಾಗಿ ವಿಜ್ಞಾಪಿಸಿಕೊಳ್ಳಬೇಕು. ನಮ್ಮ ಬಳಿಯಲ್ಲಿ ಕ್ರಿಸ್ತನ ಅಮೂಲ್ಯ ರಕ್ತದಿಂದ ಪಾವನಗೊಳಿಸಲ್ಪಟ್ಟ ಒಂದು ಯಜ್ಞವೇದಿ ಇರುತ್ತದೆ. ಈ ಯಜ್ಞವೇದಿಯ ಮಹತ್ವ ಏನಂದರೆ, ಅಬ್ರಹಾಮ ಪ್ರಾಣಿಗಳನ್ನು ವಧಿಸಿ ಅವುಗಳ ರಕ್ತದಿಂದ ಪ್ರೋಕ್ಷಿತಮಾಡಿ ಕಟ್ಟಿದ ಯಜ್ಞವೇದಿಗಿಂತ ನಮ್ಮ ಯಜ್ಞವೇದಿಯು ಅತಿಶ್ರೇಷ್ಠವಾಗಿದೆ. ಹೀಗಿರಲಾಗಿ, ಅಪೋಸ್ತಲನು ಹೇಳಿದ ಪ್ರಕಾರ “ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಜಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ.” (ಇಬ್ರಿಯರಿಗೆ 4:16)-Z ’01, 233 (ಖ 2847).

*** *** ***

ಜನವರಿ - 14

ಹೀಗಿರಲಾಗಿ ನಾನು ಸಹ ಗುರಿಗೊತ್ತಿಲ್ಲದವನಾಗಿ ಓಡದೆ ಗೆಲ್ಲಬೇಕೆಂದಿರುವ ಅವರಂತೆಯೇ ಓಡುತ್ತೇನೆ. ನಾನು ಗಾಳಿಯನ್ನು ಗುದ್ದುವವನಾಗಿರದೆ ಗೆಲ್ಲಬೇಕೆಂದವನಾಗಿ ಗುದ್ದಾಡುತ್ತೇನೆ."

-1ಕೊರಿಂಥ 9:26

ನಾವು ತಿಳುವಳಿಕೆಯಿಂದ, ಚಿತ್ತಪೂರ್ವಕವಾಗಿ ನಮ್ಮಲ್ಲಿ ಹುದುಗಿರುವ ಬಲ, ಮಾನಸಿಕ ಚತುರತೆ, ಇಡೀ ಶರೀರ ಇವುಗಳನ್ನೆಲ್ಲಾ ಹರಕೆಯ ರೂಪದಲ್ಲಿ ದೇವರಿಗೆ ಸಮರ್ಪಣೆ ಮಾಡಿರುವಲ್ಲಿ ನಮ್ಮ ನರಭಾವದ ಬಲಹೀನತೆಯ ಮೇಲೆ ಜಯಸಾಧಿಸುವದಕ್ಕೆ ಇವುಗಳಿಗೆ ಹೆಚ್ಚಿನ ಸಹಾಯವಾಗುವಂತೆ ಫಲಿಸುತ್ತವೆ. ಯಾರಾರು ತನ್ನನ್ನೇ ದೇವರಿಗೆ ಪ್ರತಿಷ್ಠೆ ಮಾಡಿಕೊಂಡು, ಕರ್ತನ ಸೈನ್ಯವಾಹಿನಿಯಲ್ಲಿ ದಾಖಲೆಗೊಂಡಿರುವದನ್ನು ಸರಿಯಾದ ರೀತಿಯಲ್ಲಿ ಅವಲೋಕನ ಮಾಡಿಕೊಂಡು, ತನ್ನಿಂದ ಇನ್ನೇನು ಹೆಚ್ಚಾಗಿ ಕೊಡುವಂತಿಲ್ಲ ಎಂಬ ಉಪಸಂಹಾರಕ್ಕೆ ಬರಬಹುದು. ಇದೆಲ್ಲ ಆದ ನಂತರ ಅವನ ಮನಸ್ಸು ಶರೀರ ಭಾವದ ಕರ್ಮಗಳಿಂದ ಹೋರಾಟ ಮಾಡಿದರೂ "ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು" ಎಂದು ಹೇಳುವಲ್ಲಿ ಎಲ್ಲವೂ ಅಂತಿಮಗೊಳ್ಳುತ್ತದೆ. ಈ ರೀತಿ ಕ್ರಿಸ್ತನ ಸೈನ್ಯದಲ್ಲಿ ತಮ್ಮನ್ನು ದಾಖಲಿಸಿಕೊಂಡಿರುವವರಿಗೆ ಮರಣದ ಪರ್ಯಂತರ ಹೋರಾಡುವದು ಅತಿಮುಖ್ಯವಾಗಿದೆ ಎಂಬ ಅಂಶ ಮನವರಿಕೆಯಾಗುತ್ತದೆ. ಇದಲ್ಲದೆ, ಈ ಯುದ್ಧದಲ್ಲಿ ಭಾಗವಹಿಸಿದ ನಂತರ ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇರುವದಿಲ್ಲ. ಹಾಗೆಯೇ, ಈ ನಂಬಿಕೆಯ ಪರವಾದ ಹೋರಾಟದಿಂದ ಒಂದು ಗಳಿಗೆಯಾದರೂ ಕದನ ವಿರಾಮ ಹೊಂದುವಂತಿಲ್ಲ-Z '03, 421 (ಖ 3272).

***     ***     ***

ಜನವರಿ - 15

ಮನುಷ್ಯನೇ ಒಳ್ಳೆಯದು ಇಂಥದೇ ಎಂದು ಯೆಹೋವನೇ ನಿನಗೆ ತೋರಿಸಿದ್ದಾನಷ್ಟೆ. ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ ಆಸಕ್ತನಾಗಿರುವದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವದು, ಇಷ್ಟನ್ನೇ ಹೊರತು ಯೆಹೋವನು ನಿನ್ನಿಂದ ಇನ್ನೇನು ಅಪೇಕ್ಷಿಸುವನು?

-ಮೀಕ 6:8

ದೇವರು ನಮ್ಮಿಂದ ಅಪೇಕ್ಷಿಸಿರುವದು, ನಾವು ಸಾಧಾರಣವಾಗಿ ಏನನ್ನು ಆತನಲ್ಲಿ ಒಪ್ಪಿಸುತ್ತೇವೋ, ಅದು ಸರ್ವವೇದ್ಯವಾಗಿರುತ್ತದೆ. ಇದಕ್ಕಿಂತ ಕಡಿಮೆಯಾಗಿರುವದನ್ನು ದೇವರು ಕೇಳಿಕೊಳ್ಳುವದಿಲ್ಲ. ಯಾಕಂದರೆ, ಯಾರಿಂದ ಲೋಕದವರಿಗೆ ನ್ಯಾಯವಿಚಾರಣೆ ಆಗಬೇಕೆಂದು ಅವರಿಗೆ ತರಬೇತಿ ನೀಡಲಾಗಿದೆಯೋ ಅವರು ದೇವರಿಗೆ ಅಪೇಕ್ಷಿತವಾಗಿರುವದನ್ನು ಸಲ್ಲಿಸುವದರ ಜವಾಬ್ದಾರಿ ಇರುವದು. ಮೇಲ್ಕಂಡ ಮೂರು ವಿಷಯಗಳು ನೆರವೇರಿಸುವದನ್ನು ಪ್ರೀತಿಯೆಂಬ ಒಂದೇ ಪದದಲ್ಲಿ ಅಡಕಗೊಂಡಿರುವದನ್ನು ಇಲ್ಲಿ ಕಾಣಬಹುದು. ನಾವು ನಮ್ಮ ನೆರೆಯವರೊಂದಿಗೆ, ಸಹೋದರರೊಂದಿಗೆ, ನಮ್ಮ ಕುಟುಂಬದ ಸದಸ್ಯರೊಂದಿಗೆ ಹಾಗೆ ನಮ್ಮೊಂದಿಗೆ ನ್ಯಾಯಬದ್ಧ ಕ್ರಮದಿಂದ ನಡೆದುಕೊಳ್ಳಬೇಕು ಎಂಬದನ್ನೆ ಪ್ರೀತಿಯು ಒತ್ತಾಯಪೂರ್ವಕವಾಗಿ ಅಪೇಕ್ಷಿಸುತ್ತದೆ. ಹಾಗೆ ನಾವು ಇತರರ ಹಕ್ಕುಭಾದ್ಯತೆಗಳು ಅಂದರೆ, ಅವರ ಭೌತಿಕ, ನೈತಿಕ, ಜ್ಞಾನದ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತಹವುಗಳನ್ನು

ಗೌರವದಿಂದ ನೋಡಿಕೊಳ್ಳುವದನ್ನು ಕಲಿಯಬೇಕು. ಹೀಗೆ ಮಾಡುವದರಿಂದ, ನಾವು ಮೇಲ್ಕಂಡ ಹಕ್ಕುಭಾದ್ಯತೆ ಆಚರಣೆಗೆ ಯಾವ ರೀತಿಯಿಂದಲೂ ಧಕ್ಕೆ ಆಗುವದಿಲ್ಲ-Z '02, 172 (ಖ 3020).

*** *** ***

ಜನವರಿ - 16

ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ. -ರೋಮಾಪುರದವರಿಗೆ 12:12

ದೇವರಿಗೆ ಬೇಸರಗೊಳ್ಳದಂತೆ ಪ್ರಾರ್ಥಿಸುವದು ನಮಗಿರುವ ಆಶೀರ್ವಾದದಾಯಕ ಸವಲತ್ತು. ಯಾವ ಸ್ಥಳದಲ್ಲಿಯಾಗಲಿ, ಯಾವ ಸಂದರ್ಭದಲ್ಲಿಯೇ ಆಗಲಿ ದೇವರಿಗೆ ಮೊರೆ ಹೋಗುವಲ್ಲಿ, ಹೃತ್ಪೂರ್ವಕ, ಮನಃಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದು ಪ್ರತಿನಿತ್ಯ ಪ್ರತಿಗಳಿಗೆ ನಡೆಯುವಲ್ಲಿ ದೇವರು ಮತ್ತು ನಮ್ಮ ಕರ್ತನಾದ ಯೇಸುವೂ ನಮ್ಮಲ್ಲಿ ನೆಲೆಗೊಂಡಿದ್ದಾನೆ ಎಂಬ ಅಂಶ ನಮ್ಮಲ್ಲಿ ದೃಢಪಡುತ್ತದೆ. ದೇವರ ದೃಷ್ಟಿಯಿಂದ ಮರೆಯಾಗದೆ ಆಯಾ ದಿನಕ್ಕೆ ಸಂಬಂಧಿಸಿದ ಕರ್ತವ್ಯವು ನೆರವೇರಿಸಿದ ನಂತರ (ಆಯಾ ದಿನಕ್ಕೆ ಸಂಬಂಧಿಸಿದ ಕರ್ತವ್ಯವನ್ನು ದೇವರ ದೃಷ್ಟಿಯಿಂದ ಮರೆಯಾಗದೆ ನೆರವೇರಿಸಿದ ನಂತರ) ನಮ್ಮ ಏಕಾಂತ ಕೋಣೆಯೊಳಗೆ ಪ್ರವೇಶಿಸಿ ದೇವರಲ್ಲಿ ನಮ್ಮ ಕಷ್ಟ ಕಾರ್ಪಣ್ಯಗಳ ಅರಿಕೆ ಮಾಡುವದು ಸಹ ಒಂದು ಅಮೂಲ್ಯವಾದ ಸತ್ಕಾರ್ಯವೇ ಆಗಿದೆ. ಇದನ್ನು ಪೂರೈಸುವಲ್ಲಿ ನಮ್ಮ ಆತ್ಮದಾಹ ಹೃದಯತಾಪ ನೀಗಿಸುವದಕ್ಕೆ ಪೂರ್ಣ ಸಹಾಯ ಒದಗಿಬರುತ್ತದೆ-Z '95, 215 (ಖ 1864).

*** *** ***

ಜನವರಿ - 17

ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ. -ಯೂದನು 21

ನಾವು ದಿನನಿತ್ಯ ಪ್ರತಿ ಘಳಿಗೆ ದೇವರ ನೀತಿ ತತ್ವಗಳನ್ನು ನಮ್ಮ ಜೀವಿತದಲ್ಲಿ ವಿಧೇಯತ್ವದಿಂದ ಅನುಷ್ಠಾನಕ್ಕೆ ತರುವಲ್ಲಿ, ನಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳುವದು ಸಾಧ್ಯವಾಗುತ್ತದೆ. ನಮ್ಮ ಜೀವಿತದಲ್ಲಿ ಸಂಭವಿಸುವ ಶೋಧನೆಗಳು, ಕಷ್ಟಕಾರ್ಪಣ್ಯಗಳು, ದುಃಖ ನಿರಾಶೆಗಳು ಇವುಗಳ ದೆಸೆಯಿಂದ ಉಲ್ಲಾಸಗೊಳ್ಳುವದು ತುಂಬಾ ಕಷ್ಟಕರವಾಗಿರಬಹುದು. ಹಾಗೆಯೇ ಸುಖ, ಶಾಂತಿಗಳು ಆಗಾಗ ನಮ್ಮ ಜೀವಿತದಲ್ಲಿ ಬಂದುಹೋಗುತ್ತಿರಬಹುದು. ಆದರೆ, ದೇವರು ಈ ಎಲ್ಲಾ ಶೋಧನೆಗಳಿಂದ ನಮ್ಮನ್ನು ಪರೀಕ್ಷಿಸಿ ತಕ್ಕ ಶಿಕ್ಷಣ ಏರ್ಪಡಿಸಿ, ನಮ್ಮಲ್ಲಿರುವ ನ್ಯೂನತೆಗಳ ದರ್ಶನವಾಗುವಂತೆ ಮಾಡುತ್ತಾನೆ. ಇದಲ್ಲದೆ, ಈ ಶಿಕ್ಷಣಪೂರ್ವಕವಾದ ಬೋಧನೆಯಿಂದ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮನ ಧರ್ಮಪ್ರಮಾಣದ ಹಾಗೂ ಸಂಪೂರ್ಣ ಪ್ರೀತಿಯ ನೋಟ ಕಾಣಬಹುದು. ಇವೆಲ್ಲಕ್ಕೂ ನಾವು ಮನಃಪೂರ್ವಕವಾಗಿ ಸ್ಪಂದಿಸುವದರ ಕಡ್ಡಾಯ ಒಳಗಾಗುವಿಕೆಯನ್ನು ದೇವರು ನಮ್ಮಿಂದ ಅಪೇಕ್ಷಿಸುತ್ತಾನೆ.

*** *** ***

ಜನವರಿ - 18

ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತ ಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ.
-ರೋಮಾಪುರದವರಿಗೆ 12:11

ದೇವರು ನೇಮಿಸಿರುವ ಓಟದ ಪಂದ್ಯದಲ್ಲಿ ಗೆಲ್ಲಬೇಕೆಂದು ಓಡುವವರು ಮುಖ್ಯವಾಗಿ ಕರ್ತನ ಸೇವೆಯಲ್ಲಿ ತೊಡಗಿರುವಾಗ ಆಸಕ್ತ ಚಿತ್ತರಾಗಿದ್ದು, ಅಭಿಮಾನದಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ನಮಗಿರುವ ಕೌಶಲ್ಯವನ್ನು ಪ್ರಾಪಂಚಿಕ ಚಿಂತೆಗಳ ಅಡಿಯಲ್ಲಿ ಹಾಗೂ ಆತಂಕ ಅಡಚಣೆಗಳನ್ನು ಬಚ್ಚಿಡುವದಾದರೆ, ನಾವು ಕರ್ತನ ಸೇವೆಯಲ್ಲಿ ತೊಡಗಿರುವದಕ್ಕೆ ಯಾವ ಅರ್ಥವೂ ಇರುವದಿಲ್ಲ. ಇದೇ ರೀತಿಯಲ್ಲಿ ನಮ್ಮ ಕೌಶಲ್ಯವನ್ನು ನಮ್ಮ ಸ್ವಂತಿಕೆಗೆ ಆಗಲಿ ಅಥವಾ ಕುಟುಂಬದ ಸದಸ್ಯರಲ್ಲಾಗಲಿ, ಈ ಕೆಳಕಂಡ ಅಂಶಗಳು ಅಂದರೆ, ದೇವರಲ್ಲಿ ನಮ್ಮ ಪ್ರತಿಷ್ಠೆಯ ಸಮಯವನ್ನು ವಿಜ್ಞಾನ, ತತ್ವಶಾಸ್ತ್ರ, ಸಂಗೀತ ಕಲೆ ವ್ಯವಹಾರಗಳು, ರಾಜಕೀಯ, ವೈಭವ ವಿಲಾಸಗಳು ಹೆಮ್ಮೆಪಡುವ ಆಸೆ ಆಕಾಂಕ್ಷೆಗಳಲ್ಲಿ ಕಳೆಯುವದಾದರೆ, ನಾವು ಅಪನಂಬಿಗಸ್ತರಾದ ಸೇವಕರಾಗಿ ಹೊರಗಿನ ಕತ್ತಲೆಯೊಳಗೆ ತಳ್ಳಲ್ಪಡುತ್ತೇವೆ-Z ’91, 9 (ಖ 1281).

***  ***  ***

ಜನವರಿ - 19

ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ. ದಿನವೆಲ್ಲಾ ಅದೇ ನನ್ನ ಧ್ಯಾನ.
-ಕೀರ್ತನೆಗಳು 119:97

ದೇವರ ವಾಕ್ಯದ ಅಧ್ಯಯನ ಮಾಡುವ ಕ್ರೈಸ್ತರಿಗೆ ಇದಕ್ಕಿಂತ ಉತ್ತಮವಾದ ಸೌಕರ್ಯ ಬೇರೊಂದಿಲ್ಲ. ಆದರೆ, ವಾಕ್ಯದ ಹೆಚ್ಚಿನ ಅಧ್ಯಯನ ಉದ್ದೇಶರಹಿತವಾಗಿದೆ. ದೇವರ ವಾಕ್ಯವನ್ನು ಓದಿ ಅದರ ಪ್ರಕಾರ ನಡೆಯದಿದ್ದರೆ, ಇದಕ್ಕಿಂತ ವ್ಯರ್ಥ ಕಾಲಹರಣ ಇನ್ನೊಂದಿಲ್ಲ. ಕರ್ತನ ಜನರು ದೇವರ ಯೋಜನೆಯ ವಿವಿಧ ಭಾಗಗಳ ಸುಜ್ಞಾನ ಪಡೆಯುವದಕ್ಕೆ ಸಕಾರಣವುಳ್ಳ ಅವಕಾಶ ಹೊಂದುವಲ್ಲಿ ಹಿಂಜರಿಯಬಾರದು. ಇದರಲ್ಲಿ ತ್ಯಾಗ ಮಾಡುವ ಸಂದರ್ಭವೂ ಇರುತ್ತದೆ. ಆದರೆ, ದೇವರ ಮಕ್ಕಳು ತಮಗಿರುವ ಅನುಕೂಲಗಳ ಸವಲತ್ತುಗಳನ್ನು ಇದರ ಪರವಾಗಿ ತ್ಯಾಗ ಮಾಡುವಂತೆ ಆಗಬೇಕೆ ಹೊರತು ಇತರರ ಅನುಕೂಲ ಸವಲತ್ತುಗಳ ದುರುಪಯೋಗ ಯಾವ ಕಾರಣಕ್ಕೂ ಮಾಡುವಂತಿಲ್ಲ. ಸತ್ಯವೇದ ಅಧ್ಯಯನವನ್ನು ಇತರರ ಸಮಯ ಹಾಳು ಮಾಡುವದಕ್ಕೆ ಉಪಯೋಗಿಸುವದು ತನ್ನ ಸ್ವಾರ್ಥತೆಯ ಧ್ಯೋತಕವಾಗಿರುವದೇ ಹೊರತು ದೇವರಾತ್ಮ ಪ್ರೀತಿಯ ಭಾವನೆ ಹೆಚ್ಚಾಗಿ ವಾಸವಾಗಿರುವದು ಎಂಬ ಅರ್ಥ ಬರುವದಿಲ್ಲ.

***  ***  ***

ಜನವರಿ - 20

ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ. ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ?
-ಇಬ್ರಿಯರಿಗೆ 12:7

ಗುಣ, ನಡತೆ ಇವುಗಳನ್ನು ನಾವು ಪೂರ್ಣವಾಗಿ ಹೊಂದಿಕೊಳ್ಳಬೇಕಾದರೆ, ಶೋಧನೆಗಳಿಗೆ ಒಳಗಾಗುವದು ಅಗತ್ಯ. ಆರಂಭದಲ್ಲಿ ಅದು ಮೊಳಕೆಯಾಗಿ ಅತಿ ಸೂಕ್ಷ್ಮವಾಗಿರುತ್ತದೆ. ದೇವರ ಪ್ರೀತಿಯೆಂಬ ಸೂರ್ಯನ ಬೆಳಕು ಅದರ ಮೇಲೆ ಹೆಚ್ಚಾಗಿ ಬೀಳುವದು ಅವಶ್ಯ. ಜೊತೆಗೆ ದೇವರ ಕೃಪೆಯೆಂಬ ವರ್ಷಧಾರೆಯ ಅಗತ್ಯವಿದೆ. ದೇವರ ಕೃಪಾ ಲಕ್ಷಣಗಳ ಸುಜ್ಞಾನವೆಂಬದರ ನಂಬಿಕೆಯ ಅಸ್ತಿವಾರದ ಆಧಾರವಿದ್ದು, ವಿಧೇಯತ್ವದ ಸ್ಫೂರ್ತಿಯ ಸಹಾಯದಿಂದ ಬೆಳವಣಿಗೆ ಸಹಜವಾಗಿ ಪ್ರಗತಿ ಸಾಧಿಸುತ್ತದೆ. ಈ ಅನುಕೂಲಕರವಾದ ಸನ್ನಿವೇಶಗಳ ಆಡಳಿತದಲ್ಲಿ ಚೆನ್ನಾಗಿ ಚಿಗುರಿಕೊಂಡು ಶಿಸ್ತು ಎಂಬ ಶುದ್ಧೀಕರಣಕ್ಕೆ ಸಿದ್ಧವಾಗುತ್ತದೆ. ಹಾಗೆಯೇ ಕಷ್ಟಕರ ಪರಿಸ್ಥಿತಿ ಬಂದು ಒದಗಿದರೂ ತಾಳ್ಮೆಯಿಂದ ಸಹಿಸಿಕೊಳ್ಳಬೇಕಾಗುತ್ತದೆ. ನಂತರ ದಿನೇ ದಿನೇ ಅದು ಬೆಳೆಯುತ್ತಾ ನಡತೆಯನ್ನು ವೃದ್ಧಿಪಡಿಸಿಕೊಂಡು, ಇನ್ನೂ ಹೆಚ್ಚಿನ ಪರಿಶೋಧನೆಗಳಿಗೆ ಒಳಪಟ್ಟು ಅದರಿಂದ ಬಲಯುಕ್ತವಾಗಿ ಕೃಪಾ ಲಾವಣ್ಯಗಳಿಂದ ಶೋಭಿತವಾಗಿ, ಬಾಧೆಗಳ ಮುಖಾಂತರ ಸದೃಢವಾಗಿ ಅಭಿವೃದ್ಧಿಯಾಗಿ ನೆಲೆಗೊಂಡು ಸಿದ್ಧಿಗೆ ಬರುತ್ತದೆ-Z '95, 107 (ಖ 9806).

***　***　***

ಜನವರಿ - 21

ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ, ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. -ಮತ್ತಾಯ 16:24

ಶಿಲುಬೆಯನ್ನು ಅನುದಿನವೂ ಹೊರುವದಕ್ಕೂ ತನ್ನನ್ನು ನಿರಾಕರಿಸುವದಕ್ಕೂ ಒಂದಕ್ಕೊಂದು ಸಂಬಂಧವಿದ್ದರೂ ಅವುಗಳ ಭಿನ್ನತೆ ಇರುವದನ್ನು ಕಾಣಬಹುದು. ತನ್ನನ್ನೇ ನಿರಾಕರಿಸಿಕೊಳ್ಳುವದು, ಮೌನವಾದ ವಿಧೇಯತೆಗೆ ಹಾಗೂ ಕರ್ತನಿಗಾಗಿ ಬಾಧೆಗಳನ್ನು ಅನುಭವಿಸುವದಕ್ಕೂ ಸಂಬಂಧವಿದೆ. ಶಿಲುಬೆಯನ್ನು ಹೊರುವದು ಕರ್ತನ ಸೇವೆಯಲ್ಲಿ ಅನುಕ್ರಮವಾಗಿ ಚಟುವಟಿಕೆಯಿಂದ ಕೂಡಿರುವದರ ವಿಶೇಷತೆ ಹೊಂದಿರುವದು. ಹೀಗಿರುವದು ನಮ್ಮ ಸ್ವಾಭಾವಿಕ ಆಶೆ ಆಕಾಂಕ್ಷೆಗಳ ಅನುಷ್ಠಾನಕ್ಕೆ ವಿರುದ್ಧವಾಗಿದೆ. ತನ್ನನ್ನೇ ನಿರಾಕರಿಸಿಕೊಳ್ಳುವದು ಹಾಗೂ ನಂಬಿಕೆಯಲ್ಲಿ ದೃಢವಾಗಿರುವದು, ಧೈರ್ಯ ಅನುಗ್ರಹಗಳನ್ನು ಹೊಂದಿರುವದಕ್ಕೆ ಗುರುತಾಗಿರುವದು. ಜಯಗೆಲುವುಗಳೇ ಶಿಲುಬೆ ಹೊರುವದರಿಂದ ಆಗುವ ಪರಿಣಾಮಗಳು. ನಮ್ಮನ್ನೇ ನಾವು ನಿರಾಕರಣೆ ಮಾಡಿಕೊಳ್ಳುವದರಿಂದ ನಮ್ಮ ಮನಸ್ಸು ಹೃದಯಗಳ ಮೇಲೆ ಜಯಸಾಧಿಸುವದಂತಾಗಿರುವದು ಮತ್ತು ನಮ್ಮ ಈ ವಿಜಯೋತ್ಸವದ ಮಾಹಿತಿ ಇತರರಿಗೆ ಸಿಗಬೇಕಿಲ್ಲ. ದೇವರು ನಮ್ಮನ್ನು ಈ ಮೂಲಕ ಆಶೀರ್ವದಿಸುವದು ನಮ್ಮಲ್ಲಿ ಇರಬೇಕಾದರೆ

ಇದರ ಸಂಗತಿ ಬೇರೆಯವರಿಗೆ ತಿಳಿಯಬೇಕಿಲ್ಲ. ಹಾಗಾದರೆ, ನಾವು ಈ ರೀತಿ ಶಿಲುಬೆ ಹೊರುವದನ್ನು ತಿಳಿಯಪಡಿಸುವದು ಯಾರಿಗೆಂದರೆ, ನಮ್ಮೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದು, ನಮ್ಮ ಜೊತೆಯಲ್ಲಿ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವಂಥವರಿಗೆ ಮಾತ್ರ, ಈ ವಿಷಯ ತಾನಾಗಿಯೇ ಗೊತ್ತಾಗುತ್ತದೆ-Z '00 118 (ಖ 2615).

*** *** ***

ಜನವರಿ - 22

ಯೆಹೋವನನ್ನು ನಿರೀಕ್ಷಿಸುವವರೇ ದೃಢವಾಗಿರ್ರಿ ನಿಮ್ಮ ಹೃದಯವು ಧೈರ್ಯದಿಂದಿರಲಿ.
-ಕೀರ್ತನೆಗಳು 31:24

ಒಂದೊಂದು ಸಾರಿ ವಿರೋಧಿಯಾದ ಸೈತಾನನು ನಮ್ಮನ್ನು ಅಧೈರ್ಯಪಡಿಸುವದಕ್ಕಾಗಿ ತಂತ್ರಗಳನ್ನು ಬಳಸುತ್ತಾನೆ. ನಾವು ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವಾಗ ಶೋಧನೆಗಳು ಕಷ್ಟ ಸಂಕಟಗಳು ತ್ಯಾಗದ ಬಲಿದಾನಗಳ ಪರಿಣಾಮವಾಗಿ ಸಂಭವಿಸುತ್ತವೆ. ಆಗ ಈ ವಿರೋಧಿಯು ಒಂದು ಕೆಟ್ಟ ಪ್ರೇರೇಪಣೆ ಮಾಡಿ ಈ ದುಸ್ಥಿತಿಗಳನ್ನು ನೀವು ಅನುಭವಿಸುತ್ತಿರುವದು ವ್ಯರ್ಥ, ಆದ್ದರಿಂದ, ಈ ಮಾರ್ಗವನ್ನು ತೊರೆಯುವದು ಸೂಕ್ತ ಎಂಬದಾಗಿ ನಮ್ಮ ಮನಸ್ಸನ್ನು ಅಲ್ಲಕಲ್ಲೋಲ ಮಾಡುತ್ತಾನೆ. ಅಂಥ ಸನ್ನಿವೇಶ ಬಂದಾಗ ನಾವು ಯಾವ ಮಾರ್ಗ ಅನುಸರಿಸಬೇಕು? ಈ ಸಂದರ್ಭದಲ್ಲಿ ನಾವು ನಮ್ಮ ಕರ್ತನಾದ ಯೇಸುವು ಹಾಕಿಕೊಟ್ಟ ಮೇಲ್ಪಂಕ್ತಿ ಅನುಸರಿಸುವದು ಅಗತ್ಯ ಹಾಗೆ ತಂದೆಯಾದ ದೇವರ ಪ್ರಸನ್ನತೆ ಎದುರು ನೋಡಬೇಕು. ದೇವರೊಂದಿಗೆ ನಮ್ಮ ಇಚ್ಛೆ ಆಕಾಂಕ್ಷೆಗಳು ಅನುಚಿತವಾಗಿದೆಯೋ ಎಂಬದನ್ನು ಕಾದು ನೋಡಬೇಕು. ಇಡೀ ಜಗತ್ತೇ ನಮ್ಮನ್ನು ದ್ವೇಷಿಸಬಹುದು, ಇಲ್ಲಸಲ್ಲದ ಆಪಾದನೆ ಹೊರಿಸಬಹುದು. ಇದನ್ನೆಲ್ಲಾ ಲೆಕ್ಕಿಸದೆ ದೇವರ ಕೃಪಾ ಭರವಸೆಗಳು ನಮ್ಮನ್ನು ಕಾಯುವಂತೆ ನಿರೀಕ್ಷಿಸುವದೇ ನಮಗಿರುವ ಆಸರೆ. ಆಗ ನಮಗೆ ದೇವರ ಒಪ್ಪಿಗೆ ದೊರೆಯಬಹುದು. ಇವೆಲ್ಲಾ ನಮ್ಮ ಪಾಲಿಗೆ ಬಂದಿರುವದಾದರೆ, ದೇವರು ನಮಗೆ ಜೀವಕ್ಕಾಗಿ ಪುನರುತ್ಥಾನದ ಪ್ರತಿಫಲವನ್ನಿತ್ತು, ನಿತ್ಯ ಜೀವದ ನೈಜತೆ ನಮ್ಮಲ್ಲಿ ಉಂಟಾಗುತ್ತದೆ-Z 01, 79 (ಖ 2773).

*** *** ***

ಜನವರಿ - 23

ಸಹೋದರರೇ ಪ್ರತಿಯೊಬ್ಬನು ಕರೆಯಲ್ಪಟ್ಟಾಗ ಯಾವ ಸ್ಥಿತಿಯಲ್ಲಿದ್ದನೋ ಅದೇ ಸ್ಥಿತಿಯಲ್ಲಿ ದೇವರ ಮುಂದೆ ಇದ್ದುಕೊಂಡಿರಲಿ. -1ಕೊರಿಂಥ 7:24

ಕೆಲವು ವೇಳೆಗಳಲ್ಲಿ ನಾವು ನಿರ್ವಹಿಸುವ ಕರ್ತವ್ಯಗಳ ಮಧ್ಯೆ ಘರ್ಷಣೆಗಳಾದ ಹಾಗೆ ಕಾಣಬಹುದು. ಆದರೆ, ನಿಜವಾಗಿ ಹಾಗೆ ಆದಂತೆ ನಡೆಯುವದಿಲ್ಲ. ಕ್ರೈಸ್ತನಾದವನ ಮೊದಲ ಆದ್ಯ ಕರ್ತವ್ಯ, ಅವನು ಮನಃಪೂರ್ವಕವಾಗಿ ತನ್ನ ಎಲ್ಲಾ ಕೆಲಸಕಾರ್ಯಗಳಲ್ಲಿ ಕರ್ತನು ಸೃಷ್ಟಿಕರ್ತನೂ ಆಗಿರುವ ದೇವರನ್ನು

ಮೊದಲು ಗೌರವಿಸಬೇಕು.  ಎರಡನೆಯದಾಗಿ, ಅವನು ಗಂಡನಾಗಿ, ತಂದೆಯಾಗಿ ಇದ್ದ ಪಕ್ಷದಲ್ಲಿ, ತನ್ನ ಹೆಂಡತಿ ಹಾಗೂ ಮಕ್ಕಳನ್ನು ನೋಡಿಕೊಂಡು ಸಂಸಾರದ ಕರ್ತವ್ಯ ನಿಭಾಯಿಸಬೇಕು.  ಹಾಗೆ ಅವಳು ಹೆಂಡತಿಯಾಗಿ ತಾಯಿಯಾಗಿ ಇದ್ದಲ್ಲಿ, ತನ್ನ ಗಂಡ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ನಿರ್ವಹಿಸಬೇಕು.  ಮದುವೆಯ ಒಪ್ಪಂದವೆಂಬದು ದೈವಿಕ ಏರ್ಪಾಟಿನಲ್ಲಿ, ಪ್ರತಿ ಗಂಡನ ಕಾಲ, ಸಮಯ ಹಾಗೆಯೇ ಪ್ರತಿ ಹೆಂಡತಿಯ ಸಮಯಗಳ ಮೊದಲ ಆಧಾರವಾಗುತ್ತದೆ.  ಈ ಆಧಾರದ ಬೇಡಿಕೆಗಳನ್ನು ನ್ಯಾಯಪೂರ್ವಕವಾಗಿ ಪೂರೈಸಿದ ನಂತರವೇ ಹೊರಗಿನವರಿಗೆ ಅವರ ಅವಶ್ಯಕತೆಗಳ ಪೂರೈಸುವಿಕೆಗೆ ಗಮನಕೊಡಬಹುದು-Z '99, 155 (ಖ 2488).

***       ***       ***

ಜನವರಿ - 24

ಪ್ರೀತಿ ಸತ್ಯತೆಗಳು ನಿನ್ನನ್ನು ಬಿಡದಿರಲಿ, ಅವುಗಳನ್ನು ನಿನ್ನ ಕೊರಳಿಗೆ ಕಟ್ಟು, ನಿನ್ನ ಹೃದಯದ ಹಲಗೆಯಲ್ಲಿ ಅವುಗಳನ್ನು ಬರೆ.                    -ಜ್ಞಾನೋಕ್ತಿ 3:3

ನ್ಯಾಯಶೀಲತೆಯು ಪ್ರೀತಿಯ ಆಜ್ಞೆಗಳಲ್ಲಿ ಪ್ರಥಮ ವೈಶಿಷ್ಟವೆನಿಸಿದರೂ ಅದೇ ಅದರ ಎಲ್ಲಾ ಅಗತ್ಯಗಳ ಅಂತಿಮವಾಗುವದಿಲ್ಲ.  ಕಟ್ಟುನಿಟ್ಟಿನ ನ್ಯಾಯನೀತಿಗಳ ಮೇರೆ ಮೀರಿದರೂ, ನಮ್ಮಲ್ಲಿರುವ ಪ್ರೀತಿ ಭಾವನೆಗಳು, ಕರುಣೆ, ಕ್ಷಮಿಸುವಿಕೆ ಎಂಬ ಸದ್ಗುಣಗಳ ಆಧಾರದಿಂದ ನಡೆದುಕೊಳ್ಳಬೇಕು ಎಂಬುದನ್ನು ನಾವು ರೂಢಿಸಿಕೊಂಡಾಗ ನಮ್ಮ ಪಾಲಿನ ನಿಜವಾದ ಸಜ್ಜನಿಕೆ ದೃಢಪಡಿಸುತ್ತದೆ.  ನಾವು ಎಲ್ಲಿಯವರೆಗೆ ಕರುಣೆ, ದಯಾರಸಗಳಲ್ಲಿ ಆಸಕ್ತರಾಗಿರುವೆವೋ ಆಗ ನಾವು ದೇವರ ಪ್ರೀತಿಯನ್ನು ಅನುಸರಿಸುವಲ್ಲಿ ಯಶಸ್ವಿಯಾಗುತ್ತೇವೆ.  ನಾವು ಇತರರೊಂದಿಗೆ ವ್ಯವಹರಿಸುವಾಗ ಈ ಒಂದು ಅಂಶವನ್ನು ಮರೆಯಬಾರದು.  ಏನಂದರೆ, ಅವರೂ ಸಹ ನಮ್ಮ ಹಾಗೆ ಅಸಂಪೂರ್ಣರೂ, ಕೆಟ್ಟಿಹೋದವರೂ ಆಗಿರುತ್ತಾರೆ.  ಆದ್ದರಿಂದ, ಅವರೊಂದಿಗೆ ನ್ಯಾಯವನ್ನು ಅನುಸರಿಸಿ ನಡೆದುಕೊಳ್ಳಬೇಕು.  ಹೀಗೆ ಮಾಡುವದಾದರೆ, ಪರಲೋಕದಲ್ಲಿರುವ ನಮ್ಮ ತಂದೆಗೆ ಮಕ್ಕಳಾಗಿರುತ್ತೇವೆ-Z '02, 171 (ಖ 3020).

***       ***       ***

ಜನವರಿ - 25

ಆದದರಿಂದ, ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ; ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವದು, ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು.          -ಮತ್ತಾಯ 6:34

ದೇವರ ಸೇವೆಯಲ್ಲಿ ತೊಡಗಿರುವ ನಮಗೆ ಮನಃಪೂರ್ವಕವಾದ ರೀತಿಯಲ್ಲಿ ಆತನಿಗಾಗಿ ದುಡಿಯಬೇಕು.  ನೀತಿಯ ಅಭಿವೃದ್ಧಿಗಾಗಿ ಹಾಗೂ ದೇವರು ವಾಗ್ದಾನ ಮಾಡಿದ ರಾಜ್ಯ

ಹೊಂದುವದಕ್ಕಾಗಿಯೂ ಶ್ರಮಿಸಬೇಕು ಎಂಬ ಉದಾತ್ತ ಭಾವನೆಗಳು ನಮ್ಮಲ್ಲಿ ಸದಾಕಾಲ ನೆಲಸಿರುವದಾದರೆ, ಭವಿಷ್ಯತ್ತಿನ ಬಗ್ಗೆ ಕಾಳಜಿ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂಬದಾಗಿ ನಮ್ಮ ಕರ್ತನು ಆಶ್ವಾಸನೆ ಕೊಡುತ್ತಾನೆ. ಆತನ ಶಿಷ್ಯರಾದ ನಮಗೆ ದಿನೇ ದಿನೇ ಸಾಕಷ್ಟು ಶೋಧನೆಗಳು ತೊಂದರೆಗಳು ಸಂಭವಿಸಿದರೂ, ನಾವು ಧೃತಿಗೆಡದೆ ಕರ್ತನ ತೋಳಿನ ಆಧಾರದಿಂದ ಇಕ್ಕಟ್ಟಾದ ಮಾರ್ಗದಲ್ಲಿ ಪಯಣಿಸುವದಕ್ಕೆ ಸಾಧ್ಯವಾಗುತ್ತದೆ. ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು ಇದೆಲ್ಲಾದರಲ್ಲಿ ದೇವರಿಗೆ ಕೃತಜ್ಞತಾ ಸ್ತೋತ್ರ. ಯಾಕಂದರೆ, ಅನುದಿನವೂ ಆತನ ಕೃಪೆಯೇ ನಮಗೆ ಇವೆಲ್ಲವನ್ನು ಸಹಿಸಿಕೊಳ್ಳುವದಕ್ಕೆ ಆಧಾರವಾಗುತ್ತದೆ-Z ’98, 44 (ಖ 2259).

***      ***      ***

ಜನವರಿ - 26

ಇದಲ್ಲದೆ ನೀವು ಉಪವಾಸ ಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ.
-ಮತ್ತಾಯ 6:16

ಉಪವಾಸ ಮಾಡುವದರಿಂದ ಒಳ್ಳೆಯದಾಗುವದು, ವಿಶೇಷವಾಗಿ ಕರ್ತನ ಜನರು ಆತ್ಮೀಕತೆಯ ಕೊರತೆಯಿಂದಾಗಿ ದೇವರ ವಾಕ್ಯದಲ್ಲಿ ಬಲಹೀನರಾಗಿ, ಲೋಕ, ಶರೀರಭಾವ, ಪಿಶಾಚ ಇವುಗಳಿಂದ ಕಠಿಣವಾದ ಶೋಧನೆಗಳಿಗೆ ಗುರಿಯಾದಾಗ ಉಪವಾಸ ಕೈಗೊಳ್ಳುವದು ಅನಿವಾರ್ಯ. ಯಾವಾಗ ನಮ್ಮ ದೈಹಿಕ ಬಲ, ಪ್ರಾಣಶಕ್ತಿ ಇವುಗಳನ್ನು ಕುಂದಿಸುತ್ತೇವೋ ಆಗ ಆತ್ಮ ಸಂಯಮವನ್ನು ಸಂಪೂರ್ಣ ಹಿಡಿತಕ್ಕೆ ಒಳಪಡಿಸಿ ಎಲ್ಲಾ ದಿಸೆಯಿಂದಲೂ ಜಯಶಾಲಿಗಳಾಗುತ್ತೇವೆ. ಇದೇ ಉಪವಾಸ ಮಾಡುವದರಿಂದ ಆಗುವ ಪರಿಣಾಮಗಳು. ಆಗಾಗ್ಗೆ ಕ್ರೈಸ್ತರಲ್ಲಿ ಬಹುಸಂಖ್ಯಾತರ ಉಪವಾಸ ಮಾಡುವದರಿಂದ ಸಹಾಯ ದೊರೆಯಬಲ್ಲದು. ಇಲ್ಲಿ ಉಪವಾಸ ಅಂದರೆ, ಆಹಾರವನ್ನು ಪೂರ್ಣವಾಗಿ ವರ್ಜಿಸುವದಲ್ಲ. ಆಯಾ ಸಮಯಕ್ಕೆ ಅನುಗುಣವಾಗಿ ಬಹು ಸಮವಾದ ಆಹಾರ ಸೇವಿಸಿಕೊಂಡಿರುವದೇ. ಆದರೆ, ಉಪವಾಸಿಯೆಂದು ಜನರಿಗೆ ತೋರುವಂತೆ ಮಾಡುವದು ಅಥವಾ ತಾವು ಹಾಗೆ ಉಪವಾಸ ಮಾಡುವದು ನಮ್ಮಲ್ಲಿ ಆಧ್ಯಾತ್ಮಿಕತೆಯ ಗುರುತು ಎಂದು ಹೆಮ್ಮೆ ಪಡುವದು ಹಾನಿಕರವಾಗಿ ಪರಿಣಮಿಸುವದಲ್ಲದೆ, ಆತ್ಮೀಕ ಗರ್ವ, ಆಷಾಡಭೂತಿತನಕ್ಕೆ ದಾರಿ ಮಾಡಿಕೊಟ್ಟಂತೆ ಆಗುವದು. ಇದು ಸ್ವಯಂ ನಿಯಂತ್ರಣ ಸಾಧಿಸುವಲ್ಲಿ ಅನುಕೂಲವಾಗದೆ, ಅದರ ಪ್ರಾಧಾನ್ಯತೆಯನ್ನು ಮೀರಿಸುವಂತಾಗುತ್ತದೆ-Z ’98, 45 (ಖ 2260).

***      ***      ***

ಜನವರಿ - 27

ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು.          -ಜ್ಞಾನೋಕ್ತಿಗಳು 4:23

ಪಾಪವೆಂಬದನ್ನು ಕೆಟ್ಟದ್ದರ ವಿವಿಧ ಸ್ವರೂಪಗಳು ಎಂಬದಾಗಿ ನಾವು ಪರಿಗಣಿಸುವದಷ್ಟೇ ಸಾಲದು ಅದಕ್ಕೆ ವಿರುದ್ಧವಾಗಿ ಎದುರಿಸಿ ನಿಲ್ಲುವಂತೆ ಮನಸ್ಸು ಮಾಡುವ ದೃಢತೆ ಇರಬೇಕು. ಯಾಕಂದರೆ, ಅದು ಕರ್ತನ ನಿಷೇಧಕ್ಕೆ ಒಳಗಾಗಿದೆ. ದೇವರು ಯಾವ ಯಾವದನ್ನು ಅನುಮೋದನೆ ಮಾಡುವದಿಲ್ಲವೋ ಅಂಥಹವುಗಳನ್ನು ಇಷ್ಟಪಡುವದನ್ನು ನಮ್ಮ ಹೃದಯದೊಳಗಿಂದ ಕಿತ್ತು ಎಸೆಯುವದು ಸಹ ಅಷ್ಟೇ ಮುಖ್ಯವಾದದ್ದು. ಇದರ ದೆಸೆಯಿಂದ, ಕ್ರಿಸ್ತ ಯೇಸುವಿನ ಅನುಯಾಯಿಗಳ ಜೀವಿತ ಹೃದಯಗಳಲ್ಲಿ ಎಂಥ ಸ್ವಚ್ಚತೆ ಮೂಡುತ್ತದೆ! ಅವರ ಭಾವನೆಗಳು ಸಹ ಶುದ್ದೀಕರಣ ಹೊಂದುವಂತೆ ಆಗುತ್ತದೆ. ಅನೇಕರು ಇಂಥ ವಿಷಯಗಳ ಬಗ್ಗೆ ಗಮನ ಕೊಡದೇ ಇದ್ದಲ್ಲಿ ಅವರು ತಮ್ಮನ್ನೇ ಶೋಧನೆಗಳಿಗೆ ಸಿಲುಕಿಸಿಕೊಂಡು ತೊಂದರೆ ಅನುಭವಿಸುವಂತಾಗುತ್ತದೆ. ಇದಲ್ಲದೆ, ಅಂಥವರು ಹೊರಗಿನ ತೋರಿಕೆಗೆ ದುರಾಚಾರಗಳನ್ನು ತ್ಯಜಿಸಿರುವಂತೆ ಕಾಣಿಸಿಕೊಂಡು ತಮ್ಮ ಹೃದಯಗಳಲ್ಲಿ ದೇವರಿಂದ ಬಹಿಷ್ಕøತವಾದವಗಳನ್ನು ಬಯಸಿ, ಗುಪ್ತದಲ್ಲಿ, ಸ್ವಂತ ಮಾಡಿಕೊಳ್ಳುವ ಹಂಬಲ ಹೊಂದಿರುತ್ತಾರೆ-Z ’99, 140 (ಖ 2479).

*** *** ***

ಜನವರಿ - 28

ಜಯಶಾಲಿಗೆ ಹೀಗೆ ಶುಭ್ರ ವಸ್ತ್ರಗಳನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು. -ಪ್ರಕಟನೆ 3:5

ನಂಬಿಗಸ್ತ ಪೂರ್ಣ, ಜಯಶಾಲಿಗಳು ತಮ್ಮ ವಸ್ತ್ರಗಳು ಲೋಕದ ಮಲಿನತ್ವಗಳಿಂದ ಹಾಳಾಗದಂತೆ ಎಚ್ಚರವಹಿಸಿ ಕಾಪಾಡಿಕೊಳ್ಳುತ್ತಾರೆ. ಹೀಗೆ ಅವರು ತಮ್ಮ ವಸ್ತ್ರಗಳನ್ನು ಮಲಿನವಾಗದಂತೆ ನೋಡಿಕೊಂಡು, ಲೋಕದವರಿಂದ ಅವುಗಳು ಕೊಳಕು ಆಗದಂತೆ ಎಚ್ಚರವಹಿಸುತ್ತಾರೆ. ಇದಲ್ಲದೆ ಅವರು ಪಾಪದಿಂದ ತಮ್ಮನ್ನೇ ಕೆಡಿಸಿಕೊಳ್ಳದೆ, ಕರ್ತನಿಂದ ಬಿಟ್ಟು ಬೇರೆ ಹೋಗದೆ ಇರುವಂತೆ ತಮ್ಮನ್ನೇ ಕಾಪಾಡಿಕೊಂಡಿದ್ದಾರೆ. ಒಂದು ವೇಳೆ ತಮ್ಮ ವಸ್ತ್ರಕ್ಕೆ ದೋಷದಿಂದ ಕಳಂಕ ಅಂಟಿದ್ದರೆ ಕ್ರಿಸ್ತನ ಅಮೂಲ್ಯ ರಕ್ತದಿಂದ ಅದನ್ನು ಶುದ್ದಿಗೊಳಿಸಿರುತ್ತಾರೆ. ಇವರು ಪಾಪಕ್ಕೆ ಮನಃಪೂರ್ವಕವಾಗಿ ವಿರೋಧವಾಗಿರುವದಲ್ಲದೆ, ತಮ್ಮ ವಸ್ತ್ರಗಳು ಯಾವ ಕಾರಣಕ್ಕೂ ಮಲಿನಗೊಳ್ಳದಂತೆ ನಿರಂತರವೂ ಕಾಯುತ್ತಿರುವದರಿಂದ, ಸೈತಾನನು ಅವರನ್ನು ಹಿಡಿಯಲಾಗುವದಿಲ್ಲ. ಕೆಡುಕನಿಂದ ಅವರಿಗೆ ಯಾವ ಕೇಡು ಸಂಭವಿಸುವದಿಲ್ಲ. ಅವರು ಕ್ರಿಸ್ತನ ಚಿತ್ತಕ್ಕನುಸಾರವಾಗಿ ತಮ್ಮನ್ನೆ ಒಪ್ಪಿಸಿಕೊಟ್ಟಿರುತ್ತಾರೆ. ಆತನೊಂದಿಗೆ ಮರಣದಲ್ಲಿ ಭಾಗಿಗಳಾಗಿದ್ದಾರೆ. ಈ ಕಾರಣದಿಂದ ಅವರು ಮನಃಪೂರ್ವಕವಾಗಿ ಪಾಪವನ್ನು ಹೇಸುತ್ತಾರೆ-Z ’97, 161 (ಖ 2159).

*** *** ***

ಜನವರಿ - 29

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು. -ಕೀರ್ತನೆಗಳು 111:10

ಸೃಷ್ಟಿಕರ್ತನೂ, ನಮ್ಮ ನಿರ್ಮಾಪಕನೂ, ಇಡಿ ಜಗತ್ತನ್ನು ಉಂಟುಮಾಡಿರುವ ಕರ್ತನೂ, ರಕ್ಷಕನೂ ಆಗಿರುವಾತನನ್ನು ಈ ರೀತಿ ಭಯಭಕ್ತಿಯಿಂದ ಸೇವಿಸುವದೇ ನಮ್ಮ ಮನೋಧರ್ಮವಾಗಿರಬೇಕು. ಆತನು ಮಾತನಾಡುವಾಗ ನಮ್ಮ ಕಿವಿಗಳು ಆತನ ಧ್ವನಿ ಕೇಳಲಿಕ್ಕೆ ಸದಾ ತವಕಿಸುತ್ತಿರಬೇಕು. ಮತ್ತು ಆತನು ಆಜ್ಞಾಪಿಸುವದನ್ನು ನೆರವೇರಿಸಲು ನಮ್ಮ ತನುಮನಗಳು ಸಿದ್ಧತೆಯಲ್ಲಿ ಜಾಗೃತವಾಗಿರಬೇಕು. ನಮ್ಮ ಸುಕ್ಷೇಮ, ಸಂತೋಷ, ಪ್ರೀತಿಯ ಉತ್ತಮ ನಡತೆ ಇವೆಲ್ಲವನ್ನು ಸರಿಪಡಿಸಿಕೊಂಡು ಆತನು ಕೊಡುವ ಶಿಕ್ಷಣಗಳನ್ನು ಕರಗತ ಮಾಡಿಕೊಂಡು ತಿಳುವಳಿಕೆ, ವಿವೇಕ, ಜ್ಞಾನ ಇವುಗಳಲ್ಲಿ ಅಭಿವೃದ್ಧಿಗೊಳ್ಳಬೇಕಾದರೆ ಪ್ರಾಮುಖ್ಯವಾಗಿ ನಾವು ದೇವರಲ್ಲಿ ಇಟ್ಟಿರುವ ಉಚ್ಚಮಟ್ಟದ ಭಯಭಕ್ತಿಗಳ ಮೇಲೆ ಅವಲಂಬಿಸಿರುತ್ತವೆ. ಆದ್ದರಿಂದ, ದೇವರು ತನ್ನ ನಾಮದಲ್ಲಿ ಭಯಭಕ್ತಿಯನ್ನು ಖಚಿತವಾಗಿ ತೋರ್ಪಡಿಸುವ ಪುತ್ರ ಧರ್ಮವನ್ನು ನಾವು ಪರಿಪಾಲಿಸುವ ಹಾಗೆ ಬೆಳಸಿ ಪೋಷಿಸುತ್ತಾನೆ-Z '96, 155 (ಖ 2002).

*** *** ***

ಜನವರಿ - 30

ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು. -ಲೂಕ 18:1

ನಾವು ದೇವರ ಸನ್ನಿಧಿಗೆ ಬರುವಾಗ, ಆತನು ಬೇರೆ ಕೆಲವು ಮಹತ್ವದ ವಿಷಯಗಳ ಬಗ್ಗೆ ಕಾರ್ಯನಿರತನಾಗಿರುತ್ತಾನೆ ಎಂಬ ಆತಂಕ ನಮಗೆ ಇರಕೂಡದು. ಹಾಗೆಯೇ, ನಾವು ಕೇವಲ ಅಲ್ಪಪ್ರಮಾಣದ ಕೋರಿಕೆಗಳ ಬಗ್ಗೆ ಆತನಲ್ಲಿ ಬೇಡುವಾಗ, ದೇವರು ನಮ್ಮ ವಿಷಯದಲ್ಲಿ ಬೇಸರಿಕೆ ವಹಿಸುವನು ಎಂಬದಾಗಿಯೂ ತಿಳಿಯಬಾರದು. ಇಂಥ ಸಂಗತಿಗಳನ್ನು ನಮ್ಮ ಮನಸ್ಸಿನಿಂದ ತೆಗೆದುಹಾಕುವದರ ಸಲುವಾಗಿ ಸ್ವಾಮಿಯು ಆಗ್ರಹಿಸುವ ಈ ವಿಧವೆಯ ಸಾಮ್ಯವನ್ನು ಹೇಳಿದ್ದು. ಈ ರೀತಿ ವಿಧವೆಯು ತನ್ನ ಹಟಬಿಡದೆ ನ್ಯಾಯಕ್ಕಾಗಿ ಒತ್ತಾಯಿಸಿದರಿಂದ ಆಕೆಯ ಮೊರೆಯನ್ನು ಲಾಲಿಸಿದಂತಾಯಿತು. ಹೀಗೆ ಮಾಡುವದರಿಂದ ನಾವು ನಮ್ಮ ಬೇಡಿಕೆಗಳ ಬಗ್ಗೆ ಹೆಚ್ಚು ಉತ್ಸಾಹ ವಹಿಸಿ, ನಮ್ಮ ಪ್ರಾರ್ಥನೆಗಳ ಸಫಲತೆ ಒಂದಲ್ಲ ಒಂದು ದಿವಸ ಲಭಿಸುವದು ಎಂಬ ನಂಬಿಕೆಯು ಮೂಡುತ್ತದೆ. ಒಂದು ವೇಳೆ ದೇವರಿಂದ ಉತ್ತರ ಸಿಗುವದು ತಡವಾದರೆ, ನಾವು ಬೇಸರದಿಂದ ನಂಬಿಕೆ ಕಳಕೊಂಡು ಕ್ಷೀಣವಾಗುವದಾಗಲಿ ಉತ್ಸಾಹವಿಲ್ಲದೆ ಕಳೆಗುಂದಬಾರದು. ದೇವರ ಕಾರ್ಯಗಳೆಲ್ಲವೂ ಕಾಲಗತಿಗನುಸಾರವಾಗಿ ನಡೆಯತಕ್ಕದ್ದರಿಂದ ಈ ರೀತಿ ಪ್ರಾರ್ಥನೆಗಳು ನೆರವೇರುವದರಲ್ಲಿ ವಿಳಂಬಗಳು ಆಗುವದು ಸಹಜ-Z '95, 214 (ಖ 1864).

ಜನವರಿ - 31

ಆತನು ದೀನರನ್ನು ತನ್ನ ವಿಧಿಗನುಗುಣವಾಗಿ ನಡಿಸುವನು ಅವರಿಗೆ ತನ್ನ ಮಾರ್ಗವನ್ನು ತೋರಿಸುವನು. -ಕೀರ್ತನೆಗಳು 25:9

ಮೇಲಣಿಂದ ಇಳಿದು ಬರುವ ಜ್ಞಾನ ಪಡೆಯುವವರಲ್ಲಿ ಇಂಥ ದೀನ ಮನೋಭಾವ ಇರಬೇಕಾದದ್ದು ಅಗತ್ಯ. ಇವರು ತಮ್ಮಲ್ಲಿರುವ ಕೊರತೆಗಳು, ತಿಳುವಳಿಕೆಯ ಅಭಾವ ಇವುಗಳ ಬಗ್ಗೆ ದೈನ್ಯತೆಯ ಭಾವದಿಂದ ಒಪ್ಪಿಕೊಂಡರೆ ಮಾತ್ರ ದೇವರಿಂದ ಉಚಿತವಾಗಿ ಬರುವಂಥ ಜ್ಞಾನವನ್ನು ಹೃತ್ಪೂರ್ವಕವಾಗಿ ಸ್ವೀಕರಿಸಬಲ್ಲರು. ಯಾಕಂದರೆ, ಈಗಿನ ಕಾಲದಲ್ಲಿ ಯಾರಾರು ಸ್ವೀಕರಿಸುವ ಮನೋಭಾವದಿಂದ ಕೂಡಿರುತ್ತಾರೋ, ಅವರಿಗೆ ಮಾತ್ರ ದೇವರು ಈ ಜ್ಞಾನವನ್ನು ಕೊಡುವದಕ್ಕೆ ಇಷ್ಟವುಳ್ಳವನಾಗಿದ್ದಾನೆ. ದೀನತೆಯಿಂದಲೇ ದೇವರ ಶಿಕ್ಷಣಗಳ ಆತ್ಮವನ್ನು ಹೊಂದಲಿಕ್ಕೆ ಸಾಧ್ಯ. ನ್ಯಾಯಬದ್ಧವಾಗಿ ಕಾರಣಪೂರ್ವಕವಾಗಿ ಪಕ್ಷಪಾತವಿಲ್ಲದೆ, ಸರಿಯಾದ ರೀತಿಯಲ್ಲಿ ಭಾವಿಸುವವರಲ್ಲಿ ಇಂಥ ದೀನ ಮನಸ್ಸು ಪ್ರಪ್ರಥಮವಾಗಿ ಬೇರೂರಿದ್ದರೆ ಮಾತ್ರ ಜ್ಞಾನದ ಭಂಡಾರವನ್ನೇ ಹೊಂದಿಕೊಳ್ಳಬಹುದು. ಆದ್ದರಿಂದ ದೈನ್ಯತೆ ಎಂಬ ಸದ್ಗುಣ ಯೇಸುಕ್ರಿಸ್ತನಲ್ಲಿ ಪ್ರಾಥಮಿಕವಾಗಿ ಮನೋಧರ್ಮವಾಗಿರುತ್ತದೆ-Z ’00, 68 (ಖ 2585).

*** *** ***